ಕರ್ನಾಟಕ ವಿಧಾನ ಸಭೆ

ಮಂಗಳವಾರ, ೧೦ನೇ ಸೆಪ್ಟೆಂಬರ್ ೧೯೮೫

ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಸದನವು ಬೆಳಿಗ್ಗೆ ಒಂಭತ್ತೂ ಘಂಟೆಗೆ ಸಮಾವೇಶಗೊಂಡಿತು.

ಸಭಾಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್) ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು.

ಪ್ರಶ್ನೋತ್ತರಗಳ ಪಟ್ಟಿಯ ಮಂಡನೆ

ಅಧ್ಯಕ್ಷರು.—ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಗಳ ೪೪(೨)ನೇ ನಿಯಮದ ಮೇರೆಗೆ ೧೦.೯.೧೯೮೫ನೇ ದಿನಾಂಕದ ಚುಕ್ಕೆ ಗುರುತಿನ ಹಾಗೂ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ ಪಟ್ಟಿಯನ್ನು ಸಭೆಯ ಮುಂದಿಡುವುದು.

ಶ್ರೀ ಹೆಚ್.ಡಿ. ದೇವೇಗೌಡ.—ಅಧ್ಯಕ್ಷರೇ, ಚುಕ್ಕೆ ಹಾಗೂ ಚುಕ್ಕೆರಹಿತ ಪ್ರಶ್ನೋತ್ತರಗಳ ಪಟ್ಟಿಯನ್ನು ಸಭೆಯ ಮುಂದೆ ಇಡುತ್ತೇನೆ.

ಅಧ್ಯಕ್ಷರು.—ಪ್ರಶ್ನೋತ್ತರ ಪಟ್ಟಿಯನ್ನು ಮಂಡಿಸಲಾಯಿತು.

ಉತ್ತರ ಕನ್ನಡ ಜಿಲ್ಲೆಯಲ್ಲಿ ಗಿಡ ನೆಡುವ ಯೋಜನೆ

೬೯೧ (೬೬೬) ಶ್ರೀ ಆರ್. ಎನ್. ನಾಯ್ಕ (ಭಟ್ಕಳ).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಹೊನ್ನಾವರ, ಭಟ್ಕಳ, ಕುಮಟಾ ತಾಲ್ಲೂಕುಗಳಲ್ಲಿ ಎಷ್ಟು ಹೆಕ್ಟೇರ್ ಪ್ರದೇಶಗಳಲ್ಲಿ ಪ್ರಸಕ್ತ ಸಾಲಿನಲ್ಲಿ ಗಿಡ ನೆಡುವ ಬಗ್ಗೆ ಯೋಚಿಸಲಾಗಿದೆ ?

ಆ) ಇದರ ಅಂದಾಜು ಲೆಕ್ಕವೆಷ್ಟು ?

ಇ) ಗಿಡ ನೆಡಲು ಬಂದ ಪ್ರತಿ ಕೂಲಿಗೆಳಿಗೆ ಕೊಡುವ ಸಂಬಳವೆಷ್ಟು ?

ಶ್ರೀ ಬಿ.ಎ. ಜೀವಿಜಯ (ಅರಣ್ಯ ರಾಜ್ಯ ಮಂತ್ರಿಗಳು).—

ಅ) ೧೯೮೫-೮೬ನೇ ಸಾಲಿನಲ್ಲಿ ೪೫೦ ಹೆಕ್ಟೇರು ಪ್ರದೇಶದಲ್ಲಿ ವನತೋಪುಗಳನ್ನು ಬೆಳೆಸುವ ಯೋಜನೆಯಿದೆ. ಅಂದರೆ ಪ್ರತಿ ತಾಲ್ಲೂಕಿನ ೧೫೦ ಹೆಕ್ಟೇರ್‌ನಂತೆ ತೆಗೆದುಕೊಳ್ಳಲಾಗಿದೆ.

ಆ) ೪೫೦ ಹೆಕ್ಟೇರು ಪ್ರದೇಶದ ವನತೋಪುಗಳನ್ನು ಬೆಳೆಸಲು ತಗಲುವ ಅಂದಾಜು ಮೆಚ್ಚಿ ೧೮.೫೪ ಲಕ್ಷ ರೂ. ಗಳಾಗುತ್ತದೆ. ಅಂದರೆ ಹೆಕ್ಟೇರಿಗೆ ರೂ. ೪೧೨೦-ತಗಲುತ್ತದೆ.

ಇ) ವನತೋಪು ಕೆಲಸಕ್ಕೆ ಬರುವ ಕೂಲಿಗಳಿಗೆ ಈ ಕೆಳಕಂಡಂತೆ ಸಂಬಳವನ್ನು ಕೊಡಲಾಗುವುದು.